ಈ) ಹಾಗಿದ್ದಲ್ಲಿ, ಈಗಲಾದರೂ ಪ್ರಾರಂಭಿಸಲು ಸರ್ಕಾರ ಸಕಾಲಿಕ ಕ್ರಮಗಳನ್ನು ಕೈಗೊಳ್ಳುವುದೇ ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :–

ಅ) ಸರ್ಕಾರಿ ಆದೇಶ ಸಂಖ್ಯೆ ಸಕಇ 8 ಅಸಂಯೋ 2007, ದಿನಾಂಕ 08–03–2007ರಲ್ಲಿ ಬಿಜಾಪೂರ ತಾಲ್ಲೂಕು, ಬಿಜಾಪೂರ ಜಿಲ್ಲೆಗೆ ಆಂಗ್ಲ ಮಾಧ್ಯಮದ ಅಲ್ಪಸಂಖ್ಯಾತರ ಹೆಣ್ಣು ಮಕ್ಕಳ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು 2007–08ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

ಆ) ಬಿಜಾಪೂರ ನಗರದಲ್ಲಿ ಪ್ರಾರಂಭಿಸಲಾಗಿದೆ.

ಇ) ಈ ಕುರಿತು ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. ಆಯವ್ಯಯದಲ್ಲಿ ನೀಡಲಾಗಿರುವ ಅನುದಾನದ ಲಭ್ಯತೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ವಸತಿ ಶಾಲೆಗಳನ್ನು ಮಂಜೂರು ಮಾಡಲ್ಪಡುತ್ತವೆ.

622 (1102) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಔಷಧಿಗಳ ಮಾರಾಟಕ್ಕೆ ನಿರ್ಬಂಧ ವಿಧಿಸಲಾಗಿದೆ ;

ಆ) ನಿರ್ಬಂಧ ವಿಧಿಸಿದ ನಂತರ ಅವುಗಳ ಪುನರ್ ಮಾರಾಟವಾಗದಂತೆ ಸರಕಾರ ಕೈಗೊಂಡಿರುವ ಕ್ರಮಗಳೇನು ;

ಇ) ನಿರ್ಬಂಧ ವಿಧಿಸಲಾದ ಔಷಧಿಗಳ ಹೆಸರುಗಳನ್ನು ಬದಲಾಯಿಸಿ ಪುನರ್ ಮಾರಾಟ ಮಾಡುತ್ತಿರುವ ಎಷ್ಟು ಪ್ರಕರಣಗಳನ್ನು ದಾಖಲಿಸಿ ಕ್ರಮ ಜರುಗಿಸಲಾಗಿದೆ.

ಈ) ಹಾಗಿದ್ದಲ್ಲಿ, ಪುನರ್ ಮಾರಾಟದ ಪ್ರಕರಣಗಳನ್ನು ದಾಖಲಿಸಿದ ನಂತರ ಆಪಾದಿತರ ಮೇಲೆ ಕೈಗೊಳ್ಳುವ ಕಾನೂನು ಕ್ರಮಗಳೇನು ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :–

ಅ) ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940ರ ಸೆಕ್ಷನ್ 26ಎ ಅನ್ವಯ ಯಾವುದೇ ಔಷಧಿಯ ಮಾರಾಟಕ್ಕೆ ನಿರ್ಬಂಧ ವಿಧಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆ.

ಕಳೆದ 03 ವರ್ಷಗಳಲ್ಲಿ ಕೇಂದ್ರ ಸರ್ಕಾರ ಅಧಿಸೂಚನೆ ಸಂಖ್ಯೆ : (1) ಜಿಎಸ್ಆರ್ 810 (ಇ) ದಿನಾಂಕ 13/12/2004 ಮತ್ತು (2) ಜಿಎಸ್ಆರ್ 510 (ಇ) ದಿನಾಂಕ 25/7/2005ರ ಪ್ರಕಾರ ಅನುಕ್ರಮವಾಗಿ ಈ ಕೆಳಕಂಡ 02 ಔಷಧಿಗಳನ್ನು ನಿರ್ಬಂಧಿಸಿದೆ.

ಅ) ರೋಫೆಕಾಕ್ಸಿಬ್ (Rofecoxib)

ಆ) ವ್ಯಾಲ್ಡೆಕಾಕ್ಸಿಬ್ (Valdecoxib)

ಆ) (1) ನಿರ್ಬಂಧಿಸಿದ ಔಷಧಗಳ ಪಟ್ಟಿಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗುತ್ತದೆ.

(2) ಸದರಿ ನೋಟಿಫಿಕೇಷನ್‌ಗಳನ್ನು ರಾಜ್ಯದಲ್ಲಿರುವ ಔಷಧ ತಯಾರಕರ ಸಂಘ ಮತ್ತು ಔಷಧ ವ್ಯಾಪಾರಿಗಳ ಸಂಘಗಳಿಗೆ ಕಳುಹಿಸಲಾಗಿದೆ ಹಾಗೂ ಇಲಾಖೆಯ ಎಲ್ಲಾ ಅಮಲುಜಾರಿ ಅಧಿಕಾರಿಗಳಿಗೆ ನೀಡಿದೆ. ಯಾವುದೇ ನಿರ್ಬಂಧ ವಿಧಿಸಿದ ಔಷಧಿಗಳು ಮಾರುಕಟ್ಟೆಯಲ್ಲಿ ಕಂಡುಬಂದರೆ ಆ ಔಷಧಿಗಳನ್ನು ಜಪ್ತಿ ಮಾಡಿ ಕಾನೂನಿನ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಅಮಲು ಜಾರಿ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ. ಔಷಧ ನಿಯಂತ್ರಣ ಇಲಾಖೆ ಅಮಲು ಜಾರಿ ಅಧಿಕಾರಿಗಳು ಈ ಕುರಿತು ಸದಾ ನಿಗಾ ಇಟ್ಟಿರುತ್ತಾರೆ.

ಇಂತಹ ಔಷಧಿಗಳ ಹೆಸರನ್ನು ಕೇಂದ್ರ ಸರ್ಕಾರದ ಔಷಧ ನಿಯಂತ್ರಣ ಇಲಾಖೆಯ ವೆಬ್‌ಸೈಟ್‌ನಲ್ಲೂ ಪ್ರದರ್ಶಿಸಲಾಗಿದೆ.

ಇ) ನಿರ್ಬಂಧ ವಿಧಿಸಲಾದ ಔಷಧಿಗಳ ಹೆಸರನ್ನು ಬದಲಾಯಿಸಿ ಪುನರ್ ಮಾರಾಟ ಮಾಡಿರುವ/ಮಾಡುತ್ತಿರುವ ಯಾವುದೇ ಪ್ರಕರಣ ಇದುವರೆಗೂ ಕಂಡುಬಂದಿಲ್ಲ. ಕಂಡುಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ) ನಿರ್ಬಂಧ ವಿಧಿಸಲಾದ ಔಷಧಿಗಳ ಹೆಸರನ್ನು ಬದಲಾಯಿಸಿ, ಪುನರ್ ಮಾರಾಟ ಮಾಡುತ್ತಿರುವ ಪ್ರಕರಣ ಕಂಡುಬಂದಲ್ಲಿ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940ರ ಪ್ರಕಾರ ಸೆಕ್ಷನ್ 26ಎ ಉಲ್ಲಂಘನೆಗಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗುವುದು ಹಾಗೂ ಸೆಕ್ಷನ್ 28ಬಿ ಪ್ರಕಾರ ಗರಿಷ್ಠ 03 ವರ್ಷ ಸಜೆ ಹಾಗೂ ರೂ. 5000/–ದವರೆಗೆ ದಂಡಕ್ಕೆ ಗುರಿಯಾಗುತ್ತಾರೆ.

624 (1131) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಪಶುವೈದ್ಯ ಚಿಕಿತ್ಸಾಲಯ ಹಾಗೂ ಪಶುಘಟಕಗಳ ಸಂಖ್ಯೆ ಎಷ್ಟು ?

ಆ) ಈ ಚಿಕಿತ್ಸಾಲಯ ಹಾಗೂ ಘಟಕಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಮುಂದಾಗಿದೆಯೇ ?

ಇ) ಹಾಗಿದ್ದಲ್ಲಿ, ಎಷ್ಟು ಕೇಂದ್ರ ಘಟಕಗಳನ್ನು ಮೇಲ್ದರ್ಜೆಗೇರಿಸಲಾಗುವುದು, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

ಈ) ಈ ಚಿಕಿತ್ಸಾಲಯಗಳಲ್ಲಿ ಅಗತ್ಯ ಸಿಬ್ಬಂದಿವರ್ಗ ಇದೆಯೇ ; ಇಲ್ಲದಿದ್ದಲ್ಲಿ, ಸಿಬ್ಬಂದಿಯ ನೇಮಕಕ್ಕೆ ಸರ್ಕಾರ ಕೈಗೊಳ್ಳುವ ಕ್ರಮವೇನು ?

ಶ್ರೀ ರೇವೂ ನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು) :–

ಅ) ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಒಟ್ಟು 20 ಪಶುಚಿಕಿತ್ಸಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳು ಈ ಕೆಳಗಿನಂತಿವೆ :–